ಮರು ಪರಿಶೀಲನೆಗೆ ಪ್ರಸ್ತಾವನೆಗಳನ್ನು ಒಪ್ಪಿಸಲು ಸರ್ಕಾರಿ ಆದೇಶ ಹೊರಡಿಸಿರುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು;

ಇ) ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಒಳಪಡಿಸುವ ಬಗ್ಗೆ ಸಚಿವ ಸಂಪುಟ ಒಪ್ಪಿಗೆ ನೀಡಿ ಆಗಸ್ಟ್ 93ರ ಒಳಗೆ ಅನುದಾನ ಬಿಡುಗಡೆ ಮಾಡುತ್ತೇವೆಂದು ಪತ್ರಿಕಾ ಪ್ರಕಟಣೆಯನ್ನು ನೀಡಿದ್ದು ಪ್ರೌಢಶಾಲೆಗಳಿಗೆ ಅನುದಾನವನ್ನು ಬಿಡುಗಡೆ ಮಾಡುವ ಬಗ್ಗೆ ಯಾವ ತೀರ್ಮಾನವನ್ನು ತೆಗೆದುಕೊಳ್ಳದೆ ದ್ವಂದ್ವನೀತಿಯನ್ನು ಅನುಸರಿಸುತ್ತಿರುವ ಬಗ್ಗೆ ಸರ್ಕಾರದ ಸ್ಪಷ್ಟ ನಿಲುವೇನು?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ(ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಮಂತ್ರಿಗಳು)

ಮೀಸಲಾತಿ ನಿಯಮಗಳನ್ನು ಉಲ್ಲಂಘಿಸಿರುವ ಈ ಶಾಲೆಗಳ ಪ್ರಕರಣವನ್ನು ಡಾ.ನಾಗರಾಜ್ ಸಮಿತಿಗೆ ಒಪ್ಪಿಸಲಾಗಿದೆ. ಅಲ್ಲಿಂದ ವರದಿ ಬಂದ ನಂತರ ಕ್ರಮ ಕೈಗೊಳ್ಳಲಾಗುವುದು.

ಈ 59 ಪ್ರಕರಣಗಳ ಬಗ್ಗೆ ಡಾ. ನಾಗರಾಜ್ ಸಮಿತಿ ಶಿಫಾರಸ್ಸು ಮಾಡಿರಲಿಲ್ಲ.

ಪದವಿ ಪೂರ್ವ ಕಾಲೇಜುಗಳನ್ನು ಅನುದಾನಕ್ಕೆ ಅಳವಡಿಸಲು ಇದುವರೆವಿಗೂ ಸಚಿವ ಸಂಪುಟ ಒಪ್ಪಿಗೆ ನೀಡಿಲ್ಲ.

ವಿಷಯ : – ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ನಿವೃತ್ತ ಶಿಕ್ಷಕರನ್ನು ನೇಮಿಸಿಕೊಳ್ಳುವ ಬಗ್ಗೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 333(538)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ)

ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿರುವ ಎಷ್ಟು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಶಿಕ್ಷಕರ ಕೊರತೆ ಇರುವುದು;

ಆ. ಈ ಖಾಲಿ ಹುದ್ದೆಗಳಿಗೆ ನಿವೃತ್ತಿ ಹೊಂದಿರುವ ಶಿಕ್ಷಕರನ್ನು ನೇಮಿಸಿಕೊಳ್ಳಲು ಸರ್ಕಾರ ನಿರ್ಧರಿಸಿದೆಯೇ;

ಇ. ರಾಜ್ಯದಲ್ಲಿ ತರಬೇತಿ ಹೊಂದಿದ ನಿರುದ್ಯೋಗಿ ಶಿಕ್ಷಕರು ಇದ್ದರೂ ಸಹ, ಈ ರೀತಿ ನಿರ್ಧಾರ ಕೈಗೊಳ್ಳಲು ಕಾರಣಗಳೇನು?

ಈ. ನಿರುದ್ಯೋಗಿ ಶಿಕ್ಷಕರನ್ನು ಈ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಿಸಿಕೊಳ್ಳಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀಮತಿ ನಾಗಮ್ಮ ಸಿ.ಕೇಶವಮೂರ್ತಿ(ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವರು)

ವಿವಿಧ ಸರಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ 9981 ಮತ್ತು 4845 ಹುದ್ದೆಗಳು ಅನುಕ್ರಮವಾಗಿ ಖಾಲಿ ಇವೆ.

ಇಲ್ಲ

ಉದ್ಭವಿಸುವುದಿಲ್ಲ.

ಇಲ್ಲ.

ವಿಷಯ : – ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಲು ಖರ್ಚಾದ ಹಣ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 335(540)

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್(ಬಸವಕಲ್ಯಾಣ)

ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೀದರ್ ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಲು ಕಳೆದ 3 ವರ್ಷಗಳಿಂದ ಎಷ್ಟು ಹಣ ಖರ್ಚು ಮಾಡಲಾಗಿದೆ ? (ತಾಲ್ಲೂಕುವಾರು ವಿವರ ನೀಡುವುದು)

ಆ) ಜಿಲ್ಲೆಯಲ್ಲಿ ಅರಣ್ಯ ಬೆಳೆಸಲು ವಾತಾವರಣ ಸರಿ ಇದ್ದರೂ ಸರ್ಕಾರ ಈ ಬಗ್ಗೆ ಆಸಕ್ತಿ ತೋರದಿರಲು ಕಾರಣಗಳೇನು?

ಇ) ಬಸವ ಕಲ್ಯಾಣ ತಾಲ್ಲೂಕಿನಲ್ಲಿ ಮೇಲ್ಕಂಡ ಯೋಜನೆಯಡಿಯಲ್ಲಿ ಅರಣ್ಯ ಬೆಳೆಸಲು ಯಾವ ಕ್ರಮ ರೂಪಿಸಲಾಗಿದೆ?

ಶ್ರೀ ಎಂ.ಪಿ.ಕೇಶವಮೂರ್ತಿ

(ಅರಣ್ಯ ರಾಜ್ಯ ಸಚಿವರು)

ಬೀದರ್ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಾಮಾಜಿಕ ಅರಣ್ಯ ಯೋಜನೆಯಡಿಯಲ್ಲಿ ಒಟ್ಟು 163.295 ಲಕ್ಷ ರೂ. ಗಳನ್ನು ಅರಣ್ಯೀಕರಣ ಕಾರ್ಯಗಳಿಗಾಗಿ ಖರ್ಚು ಮಾಡಲಾಗಿದೆ. ಆವುಗಳ ವಾರ್ಷಿಕ ಮತ್ತು ತಾಲ್ಲೂಕುವಾರು ವಿವರ ಈ ಕೆಳಕಂಡಂತಿದೆ :

ತಾಲ್ಲೂಕು	1990-91	1991-92	1992-93
	ರೂ.	ರೂ.	ರೂ.
ಔರಾದ್	6.306ಲಕ್ಷ	8.826ಲಕ್ಷ	8.540ಲಕ್ಷ
ಬಸವಕಲ್ಯಾಣ	9.730 "	12.345 "	11.822 "
ಭಾಲ್ಕಿ	7.180 "	6.503 "	6.785 "
ಬೀದರ್	13.920 "	22.643 "	16.790 "
ಹುಮನಾಬಾದ್	8.347 "	10.788 "	12.770 "
ಒಟ್ಟು ರೂ.	45.483 "	61.105 "	56.707 "

ಸರ್ಕಾರವು ಬೀದರ್ ಜಿಲ್ಲೆಯಲ್ಲಿ ವೃಕ್ಷ ನೆಡುತೋಪುಗಳನ್ನು ಬೆಳೆಸಲು ಆಸಕ್ತಿಯನ್ನು ತೋರಿಸಿದೆ.

ಪ್ರಸಕ್ತ ಸಾಲಿನಲ್ಲಿ ಬಸವಕಲ್ಯಾಣ ತಾಲ್ಲೂಕಿನಲ್ಲಿ ಕಾಮಗಾರಿಗಳ ಗುರಿಯು ಈ ಕೆಳಕಂಡಂತಿದೆ.

1)	1993ರ ಮಳೆಗಾಲದಲ್ಲಿ ವೃಕ್ಷ ನೆಡುತೋಪು ನಿರ್ಮಾಣ	-	49.44 ಹೆ. (ಈ ಕೆಲಸವು ಈಗಾಗಲೇ ಪೂರ್ಣಗೊಂಡಿದೆ)
2)	ನೆಡುತೋಪು ನಿರ್ವಹಣೆ	-	95.00 ಹೆ.
3)	1994ರ ಮಳೆಗಾಲದಲ್ಲಿ ವೃಕ್ಷ ನೆಡುತೋಪು ನಿರ್ಮಿಸಲು ಮುಂಗಡ ಕೆಲಸ	-	70 ಹೆ.
4)	1994ರ ಮಳೆಗಾಲದಲ್ಲಿ ನೆಡಲು ಮತ್ತು ವಿತರಿಸಲು ಸಸಿಗಳನ್ನು ಬೆಳೆಸುವುದು.	-	1.69 ಲಕ್ಷ